ಬದುಕಿಗೆ ಪ್ರೀತಿ ಅವಶ್ಯ ಬೇಕು ನಿಜ. ಆದರೆ ಪ್ರೀತಿಯೇ ಬದುಕಲ್ಲ. ಒಂದು ಹಂತದಲ್ಲಿ ಸ್ಟೇಟಸ್ ಇಲ್ಲದ ಬದುಕು ಚೆಂದ ಕಾಣೋದಿಲ್ಲ. ಬಡವನಿಗೂ ಪ್ರೀತಿಸುವ ಹಕ್ಕಿದೆ ನಿಜ. ಆದರೆ ಬಡತನಕ್ಕೆ ಪ್ರೀತಿಯನ್ನು ದಕ್ಕಿಸಿಕೊಳ್ಳುವ ತಾಕತ್ತಿರೋದಿಲ್ಲ. ಬಡವನಾಗಿ ಹುಟ್ಟೋಣ. ಆದರೆ ಬಡವನಾಗಿಯೇ ಸಾಯಬಾರದೆಂಬುದು ನನ್ನ ಪಾಲಿಸಿ. ಇವನೋ ಬಡತನ ಪ್ರಾಮಾಣಿಕತೆಯ ದ್ಯೋತಕ ಅನ್ನೋನು. ಬಡತನವನ್ನು ನಾನು ಪ್ರೀತಿಸ್ತೇನೆ. ಶ್ರೀಮಂತ ಅಂತ ಹೇಳಿಕೊಳ್ಳೋಕೆ ಹೆದರಬೇಕೇ ಹೊರತು ಬಡವನಿಗೆ ಯಾರ ಹೆದರಿಕೆ? ಬಂಡಾಯ ಹುಟ್ಟೋದೇ ದರಿದ್ರರಲ್ಲಿ ಕಣೆ ಬದುಕೋಕೆ ಬೇಕಿರೋದು ದುಡ್ಡಲ್ಲ ಪ್ರೀತಿ. ಹಣವಿಲ್ಲದವನು ಬಡವನಲ್ಲ. ನಾಳೆಗಳ ಬಗ್ಗೆ ಭರವಸೆಯಿಲ್ಲದವನು ಬಡವ. ಇದವನ ಫಿಲಾಸಫಿ. ಮೊದಲಿಗೆಲ್ಲಾ ಅವನ ಮಾತಿಗೆ ಬರಹಕ್ಕೆ ಧೈರ್ಯಕ್ಕೆ ಮರುಳಾಗಿ ಹೋದೆ. ವರ್ಷಗಳುರುಳಿದಂತೆ ಅವನು ಚಿಗುರೊಡೆದು ಕೊಂಬೆರೆಂಬೆಗಳಿಂದ ದಟ್ಟವಾಗಿ ಹರಡಿಕೊಳ್ಳುವ ಮರದಂತೆ ಭಾಸವಾಗದೆ ಬೊನ್ಸಾಯ್‌ನಂತೆ ಕಾಣಹತ್ತಿದ. ಎಂ.ಎ.ನಲ್ಲಿ ನಾನು ಪಾಸ್ ಆಗಿ ಅವನು ಢುಂಕಿ ಹೊಡೆದಾಗ ನಂಬಲಾಗಲಿಲ್ಲ. ಈ ಜುಜುಬಿ ಡಬ್ಬಲ್ ಡಿಗ್ರಿಯಿಂದೇನಾಗಬೇಕು? ಜ್ಞಾನಾರ್ಜನೆಗೆ ಓದು ಬೇಕು. ಓದಿದೆ ಅಷ್ಟೆ ಕಣೆ. ನನ್ನ ಆಂಬಿಶನ್ಸ್ ಬೇರೇನೆ ಇವೆ. ಅಂತ ಹೊಳೆದಂಡೆ ಮೇಲೆ ಕೂತು ಮಾತು ಹರಿಸೋನು. ಅವನ ಮಾತುಗಳು ನನಗೆಂದೂ ಬೋರ್ ಹೊಡೆಸಲಿಲ್ಲವಾದರೂ ನನ್ನಾಶೆಗಳಿಗೆ ನೀರೆರೆಯಲಿಲ್ಲ. ಕಾಲೇಜ್ ಕ್ಯಾಂಪಸಲ್ಲಿ ದಿನವೂ ಮೀಟು ವಾಕು ಟಾಕು ಸಾಗೋದು. ಎಂ.ಎ. ಮುಗಿದ ಮೇಲೆ ಭೇಟಿಯಾಗೋದೂ ಕಷ್ಟವಾಯಿತು. ಬೆಂಗಳೂರಲ್ಲಿ ಅವನ ಮನೆಯೆಲ್ಲೋ ವಿಜಯನಗರದಲ್ಲಂತೆ. ನಾನಿರೋದು ಜಯನಗರ. ಮಾತಾಡಿಕೊಂಡೇ ಭೇಟಿಯಾಗಬೇಕು. ಅವನದ್ದೋ ಡಬ್ಬಾ ಮೊಬೈಲ್. ಅವನು ಸಿಕ್ಕಾಗೊಮ್ಮೆ ಪಿಎಚ್.ಡಿ. ಮಾಡಬೇಕಂತಿದೀನಪ್ಪಾ ಅಂತ ಹೇಳಿದೆ. ನೀನೇನ್ ಮಾಡ್ತಿಯಾ ಮುಂದೆ? ಪ್ರಶ್ನಿಸಿದೆ.

'ಓದು ಸಾಕೆನಿಸಿದೆ. ಏನಾದರೂ ಸಾಧಿಸಬೇಕು ಅನ್ನಿಸ್ತಿದೆ ಕಣೆ. ಏನಾದರೂ ಸಾಧಿಸದೆ ಸತ್ತರೆ ಸಾವಿಗೆ ಅಪಮಾನ. ಬದುಕಿದ್ದೂ ಏನೂ ಸಾಧಿಸದಿದ್ದರೆ ಬದುಕಿಗೇ ಅಪಮಾನ ಅಲ್ವಾ? ನಾವೆಲ್ಲಾ ಕತೆ ಬರೆದು ಜ್ಞಾನಪೀಠಿಗಳಾಗೋದು ಅಷ್ಟರಲ್ಲೇ ಇದೆ. ನನ್ನ ಕತೆ ಒಂದನ್ನು ಸಿನಿಮಾ ಮಾಡಬೇಕಂತಿದೀನಿ' ಅಂದ. ನಾನು ಬೆಚ್ಚಿದೆ. 'ಅಷ್ಟೊಂದು ದುಡ್ಡು ಇದೆಯೇನೋ?' ರೇಗಿದೆ. 'ಬೇಕಿರೋದು ದುಡ್ಡಲ್ಲಮ್ಮ... ಧಮ್ಮು. ದುಡ್ಡಿರೋರೆಲ್ಲಾ ಸಿನಿಮಾ ಮಾಡೋಲ್ಲ ಕಣೆ. ಟೇಸ್ಟ್ ಇರಬೇಕು. ನನಗೂ ದುಡ್ಡು ಇರೋ ಫ್ರೆಂಡ್ಸ್ ಇದಾರೆ. ಏನಾದ್ರೂ ಮಾಡೇ ಮಾಡ್ತೀನಿ ನೋಡ್ತಿರು' ಅನ್ನೋನು. ಯಾವಾಗಲೋ ಸಿಗೋನು. ವರ್ಷಗಳುರುಳಿದರೂ ಅವನದು ಅದೇ ರಾಗ ಅದೇ ತಾಳ. ಕತೆ ಬರೆಯೋದೂ ನಿಲ್ಲಿಸಿಬಿಟ್ಟಿದ್ದ.

ಮನೆಯಲ್ಲೋ ನನ್ನ ಮದುವೆಯ ಧಾವಂತ. ಒಮ್ಮೆ ಸಿಕ್ಕಾಗ ಹೇಳಿದೆ. ಮೌನವಾಗಿದ್ದ. ಲೇಟ್ ಮಾಡಿದ್ರೆ ನನ್ನ ಕಳ್ಕೋತಿ ಕಣೋ ಅಂದೆ. ಅತ್ತೇಬಿಟ್ಟ; ತಬ್ಬಿ ಮುತ್ತಿಟ್ಟ. ಹುಚ್ಚು ಹುಚ್ಚಾಗಿ ಆಡಿದ. ನಡಿಯೋ ಎಲ್ಲಾದರೂ ಓಡಿ ಹೋಗಿ ಬದುಕೋಣ ಅಂದೆ. ದುಡಿಮೇನೇ ಇಲ್ಲವಲ್ಲೆ? ಓಡಿ ಹೋಗಿ ಮಾಡೋದೇನು? ನನಗಾಗಿ ಕಾಯೋಕಾಗಲ್ವೇನೆ ಅಂತ ಪೀಡಿಸಿದ. ನನ್ನದೋ ಪ್ರಾಕ್ಟಿಕಲ್ ಮೈಂಡ್. ಯೋಚಿಸಿ ಹಣ್ಣಾದೆ. ಅವನ ಮನೇಲಿ ಅವನ ತಾಯಿ ಟೈಲರಿಂಗ್ ಮಾಡಿ ಸಂಪಾದಿಸೋದು ನಂಗೊತ್ತು. ವರ್ಷಗಳುರುಳಿದರೂ ಉದ್ಯೋಗ ಕಂಡುಕೊಳ್ಳದ, ತನ್ನ ಕಾಲ ಮೇಲೆ ತಾನು ನಿಲ್ಲದ ಅವನು ನಿಷ್ಪ್ರಯೋಜಕನೆನ್ನಿಸಿಬಿಟ್ಟ. ಅಪ್ಪ ನೋಡಿದ ಹುಡುಗ ಸಾಫ್ಟ್‌ವೇರ್.

